# ಯುದ್ಧಭೂಮಿಯ ಮಕ್ಕಳು



'ನಾನಿಲ್ಲ ಅಂತ ನಮ್ಮನೆ ನಾಯಿ, ನಮ್ಮನೆ ಬೆಕ್ಕಿನ ಜೊತೆ ಫ್ರೆಂಡ್‌ಶಿಪ್ ಮಾಡಿಕೊಂಡಿದೆ' ಎನ್ನುವ ಪುಟಾಣಿಯ ಮಾತನ್ನು ಹೇಗೆ ಅರ್ಥೈಸುವುದು?

**ಸ್ವಯಂಪ್ರಭಾ**

ಪ್ರಿಯಾಂಕಾ ಚೋಪ್ರಾ ಇತ್ತೀಚೆಗೆ ಇನ್‌ಸ್ಟಾಗ್ರಾಂನಲ್ಲಿ ಒಂದು ಸ್ಟೋರಿ ಹಂಚಿಕೊಂಡಿದ್ದರು. ಸಾಮಾನ್ಯವಾಗಿ ಅವರು ಹಂಚಿಕೊಳ್ಳುವ ಫ್ಯಾಷನ್ ಮತ್ತು ಉದ್ಯಮ ಲೋಕದ ವಿಚಾರಗಳಂತಲ್ಲ ಈ ಸ್ಟೋರಿ.

ಯುನಿಸೆಫ್‌ನ 'ಗುಡ್‌ವಿಲ್ ರಾಯಭಾರಿ' (ಸದ್ಭಾವನಾ ರಾಯಭಾರಿ) ಆಗಿರುವ ಅವರು ಪೋಲೆಂಡ್‌ಗೆ ಹೋಗಿದ್ದರು. ಯುದ್ಧಪೀಡಿತ ಉಕ್ರೇನ್‌ನಿಂದ ಪಲಾಯನ ಮಾಡಿರುವ ಮಕ್ಕಳು ಮತ್ತು ಅವರ ಕುಟುಂಬಗಳು ಪೋಲೆಂಡ್‌ನ ವಾರ್ಸಾವದಲ್ಲಿರುವ ನಿರಾಶ್ರಿತರ ಕೇಂದ್ರದಲ್ಲಿ ರಕ್ಷಣೆ ಪಡೆದಿದ್ದು, ಅಲ್ಲಿನ ಮಕ್ಕಳನ್ನು ಪ್ರಿಯಾಂಕಾ ಭೇಟಿಯಾಗಿದ್ದರು. ಕೇಂದ್ರದಲ್ಲಿರುವ, ಏಳು ವರ್ಷದ ಕಾಟಿಯಾ ಉದ್ದ ಜುಟ್ಟಿನ ಪುಟ್ಟ ಹುಡುಗಿ. ನೀಲಿ ಕನ್ನಡಕ ಧರಿಸಿದ್ದಾಳೆ. ಪಶುವೈದ್ಯೆಯಾಗಬೇಕು ಎಂಬ ಕನಸು ಕಾಣುತ್ತಿದ್ದಾಳೆ. ಉಕ್ರೇನ್‌ನಿಂದ ಅವಳು ಮತ್ತು ಅಮ್ಮ ಓಡಿ ಬಂದು ನಿರಾಶ್ರಿತರ ಶಿಬಿರ ಸೇರಿಕೊಂಡಿದ್ದಾರೆ. ಅವಳ ಪ್ರೀತಿಯ ನಾಯಿ ಉಕ್ರೇನ್‌ನಲ್ಲಿ ಅಪ್ಪನ ಬಳಿಯೇ ಇದೆ. 'ನಾನಿಲ್ಲ ಅಂತ ನಮ್ಮನೆ ನಾಯಿ, ನಮ್ಮನೆ ಬೆಕ್ಕಿನ ಜೊತೆ ಫ್ರೆಂಡ್‌ಶಿಪ್ ಮಾಡಿಕೊಂಡಿದೆಯಂತೆ. ಬೆಕ್ಕು ಮತ್ತು ನಾಯಿಯನ್ನಷ್ಟೇ ಒಂದು ಕಡೆ ಬಿಟ್ಟುಬಿಟ್ಟರೆ ಅವು ಮನುಷ್ಯರಂತೆಯೇ ಫ್ರೆಂಡ್ಸ್ ಆಗ್ತಾವೆ ಗೊತ್ತಾ...' ಎಂದು ಕಾಟಿಯಾ ಹೇಳುವುದನ್ನು ಚೋಪ್ರಾ ಕಣ್ಣರಳಿಸಿ ಕೇಳಿಸಿಕೊಳ್ಳುತ್ತಿದ್ದಾರೆ.

ಹದಿಮೂರು ವರ್ಷದ ರೆಗಿನಾ ಕಾರ್ಖಿವ್‌ನ ನಿವಾಸಿ. ಪ್ರಿಯಾಂಕಾ ಚೋಪ್ರಾರಷ್ಟೇ ಎತ್ತರವಿರುವ ರೆಗಿನಾ ಕೂಡ ಕನಸುಕಂಗಳ ಚೆಲುವೆ. ಒಳ್ಳೆಯ ಈಜುಪಟುವಾಗಿದ್ದ ಆಕೆಯ ಅಂತರಂಗದಲ್ಲಿ ಏನೆಲ್ಲಾ ಸಾಧನೆ ಮಾಡುವ ಕನಸುಗಳಿದ್ದವೋ? ಆದರೆ ಈಗ ಶಿಬಿರದಲ್ಲಿ ಈಜು ಕಲಿಯಬಯಸುವವರಿಗೆಲ್ಲ ಅವಳು ಈಜು ಕಲಿಸುತ್ತಿದ್ದಾಳೆ. 'ಬೇಸರದ ಛಾಯೆಯೇನೂ ಆಕೆಯ ಮುಖದಲ್ಲಿ ಕಾಣುವುದಿಲ್ಲ. ಆದರೆ ನೋವಿನ ಗೆರೆಗಳನ್ನು ತಾನು ಓದಬಲ್ಲೆ' ಎಂದು ಪ್ರಿಯಾಂಕಾ ಬರೆದುಕೊಂಡಿದ್ದಾರೆ. ರೆಗಿನಾ ಬಣ್ಣಬಣ್ಣದ ಮಣಿಗಳಿಂದ ಮಾಡಿದ ಒಂದು ಬ್ರೇಸ್‌ಲೆಟ್ ಅನ್ನು ಪ್ರಿಯಾಂಕಾ ಅವರಿಗೆ ಉಡುಗೊರೆಯಾಗಿ ಕೊಡುವ ವಿಡಿಯೊ ಕೂಡ ಹಾಕಿದ್ದಾರೆ.

ಪೋಲೆಂಡ್‌ನಲ್ಲಿ ವಾರ್ಸಾವ್ ಮುನ್ಸಿಪಾಲಿಟಿ ಸಹಯೋಗದೊಂದಿಗೆ ಯುನಿಸೆಫ್ ಮಕ್ಕಳಿಗಾಗಿ ನಡೆಸುತ್ತಿರುವ ಎಜುಕೇಷನ್ ಹಬ್‌ನಲ್ಲಿ ಯುದ್ಧಪೀಡಿತ ಉಕ್ರೇನ್‌ನ ಮಕ್ಕಳಿಗಾಗಿ ಭಾಷಾ ಕಲಿಕೆ, ಕೌಶಲಗಳ ಕಲಿಕೆ ಮುಂತಾಗಿ ಅನೇಕ ಕಲಿಕೆಗಳಿಗೆ ಪೂರಕ ವಾತಾವರಣ ನಿರ್ಮಿಸಲಾಗುತ್ತಿದೆ. ಅಲ್ಲಿಯೂ ಪ್ರಿಯಾಂಕಾ ಅನೇಕ ಪುಟಾಣಿಗಳ ಬಳಿ, ಅವರ ಅಮ್ಮಂದಿರ ಬಳಿ ಮಾತನಾಡಿದ್ದಾರೆ. ಉಕ್ರೇನ್‌ನಿಂದ ನಿರಾಶ್ರಿತರಾಗಿ ಹೊರಬಿದ್ದವರ ಪೈಕಿ ಹೆಚ್ಚಿನವರು ಪೋಲೆಂಡ್‌ನಲ್ಲಿದ್ದಾರೆ. ಅವರ ಪೈಕಿ ಶೇ. 90ರಷ್ಟು ಮಂದಿ ಮಕ್ಕಳು ಮತ್ತು ಮಹಿಳೆಯರು. ಪುರುಷರಿಗೆ ದೇಶದಿಂದ ಹೊರಹೋಗುವ ಅವಕಾಶ ಇಲ್ಲದೇ ಇರುವುದರಿಂದ ಮಕ್ಕಳು ಮತ್ತು ಮಹಿಳೆಯರು ಹೀಗೆ ನಿರಾಶ್ರಿತರ ಶಿಬಿರದಲ್ಲಿ ಆಶ್ರಯ ಪಡೆಯುವುದು ಸಾಧ್ಯವಾಗಿದೆ. ಮತ್ತೆ ತಮ್ಮವರನ್ನು ಭೇಟಿಯಾಗುತ್ತೇವೋ ಇಲ್ಲವೋ ಎಂಬ ಆತಂಕವನ್ನು ಎದೆಯಲ್ಲಿಟ್ಟುಕೊಂಡು ಆ ಮಹಿಳೆಯರು, ಅಲ್ಲಿನ ಮಕ್ಕಳ ಕಂಗಳಲ್ಲಿ ಸಂತೋಷವನ್ನು ತುಂಬಲು ಪ್ರಯತ್ನಿಸುತ್ತಿರುವ ದೃಶ್ಯವೇ ನೋವಿನದ್ದೂ ಹೌದು, ಸ್ಫೂರ್ತಿದಾಯಕವೂ ಹೌದು.

ನಿರಾಶ್ರಿತ ಅಮ್ಮಂದಿರೇ ಅಲ್ಲಿ ಮಕ್ಕಳಿಗೆ ದಾದಿಯರು, ಶಿಕ್ಷಕಿಯರು. ಯುದ್ಧದ ಕೆಟ್ಟ ದೃಶ್ಯಗಳು ಮಕ್ಕಳಿಗೆ ಸಿಂಹಸ್ವಪ್ನವಾಗದಂತೆ ಅವರ ಮನಸ್ಸಿನಿಂದ ಸಾಧ್ಯವಾದಷ್ಟು ಅವುಗಳನ್ನು ಮರೆಸುವ ನಿಟ್ಟಿನಲ್ಲಿ ಸದಾ ಒಂದಿಲ್ಲೊಂದು ಪ್ರಯತ್ನ ಮಾಡುತ್ತಿರುವವರು. ಅಲ್ಲಿ 'ನಿಮ್ಮ ಮಕ್ಕಳು, ನಮ್ಮ ಮಕ್ಕಳು' ಎಂಬ ಭೇದಭಾವಕ್ಕೆ ಅವಕಾಶವಾದರೂ ಎಲ್ಲಿದೆ. ಮಕ್ಕಳೆಲ್ಲರೂ ಚೆನ್ನಾಗಿರಲಿ ಎಂದಷ್ಟೇ ಪ್ರತಿಯೊಬ್ಬ ಅಮ್ಮನ ಕರುಳಿನ ಕೂಗು.

ಯುದ್ಧಗಳಿಗೆ ಯಾವತ್ತೂ ಮಕ್ಕಳು ಕಾರಣರಲ್ಲ, ಹೊಣೆಗಾರರಲ್ಲ. ಆದರೆ ಜಗತ್ತಿನಲ್ಲಿ ಯುದ್ಧಗಳು ಅತೀ ಹೆಚ್ಚು ಪರಿಣಾಮ ಬೀರುವುದು ಮಕ್ಕಳ ಮೇಲೆ. ಯುದ್ಧಗಳನ್ನು ಮಾಡಲು ನಿರ್ಧರಿಸುವವರು ಮತ್ತು ಭಾಗವಹಿಸುವವರು ಅದಾಗಲೇ ಈ ಜಗತ್ತಿನಲ್ಲಿ ಬದುಕನ್ನು ಕಟ್ಟಿಕೊಂಡಿರುತ್ತಾರೆ. ಅಪ್ಪ, ಅಮ್ಮ, ಕುಟುಂಬದ ಜೊತೆಗೆ ಬೆಚ್ಚನೆಯ ಬಾಳುವೆಯನ್ನು ಮಾಡಿರುತ್ತಾರೆ. ಆದರೆ ಯುದ್ಧಗಳು ಘೋಷಣೆಯಾದರೆ, ಮಕ್ಕಳು ಅಪ್ಪ ಅಮ್ಮನ ಪ್ರೀತಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಶಿಕ್ಷಣ, ಆಟಪಾಠಗಳಿಂದ ವಂಚಿತರಾಗಬೇಕಾಗುತ್ತದೆ. ಅವರ ಮುಖದ ಮೇಲಿನ ಹಾರ್ದಿಕ ನಗುವನ್ನೇ 'ಯುದ್ಧ' ಕಿತ್ತುಕೊಳ್ಳುತ್ತದೆ.

ಶಿಕ್ಷಣ ಮತ್ತು ಸಂವಾದಕ್ಕೆ ಸಾಕಷ್ಟು ಅವಕಾಶವಿರುವ ಆಧುನಿಕ ಜಗತ್ತಿನಲ್ಲಿಯೂ ಮನುಷ್ಯರು ಮತ್ತೆ ಮತ್ತೆ ಯುದ್ಧವನ್ನೇ ಏಕೆ ಆಹ್ವಾನಿಸುತ್ತಾರೋ? ದೇಶ ದೇಶಗಳ ನಡುವಿನ ಯುದ್ಧದ ಬಗೆಗಷ್ಟೇ ಅಲ್ಲ, ಪ್ರತಿಯೊಂದು ಜಗಳ, ದೊಂಬಿ ಗಲಭೆಗಳೂ ನಮ್ಮದೇ ಮನೆಯ ಮಕ್ಕಳ ಮನಸ್ಸನ್ನು ಗಾಸಿಗೊಳಿಸುತ್ತವೆ. ಅವರ ಮನದಲ್ಲಿ ಆತಂಕದ ಮೋಡವು ಹೆಪ್ಪುಗಟ್ಟುತ್ತದೆ.

ಸ್ವಾತಂತ್ರ್ಯ ದಿನಾಚರಣೆಯ ನಮ್ಮ ದೇಶಕ್ಕಾಗಿ ಹೋರಾಡಿ ಬಲಿದಾನ ಮಾಡಿದವರನ್ನು ಸ್ಮರಿಸಿಕೊಳ್ಳಲು ಒಂದು ಉತ್ತಮ ಸಂದರ್ಭ. ಮುಂದಿನ ದಿನಗಳಲ್ಲಿ ಗಲಾಟೆಗಳು, ದೊಂಬಿಗಳು ಘಟಿಸದಂತೆ, ಯುದ್ಧದಂತಹ ಸನ್ನಿವೇಶಗಳು ಸೃಷ್ಟಿಯಾಗದಂತೆ ಕೆಡುಕನ್ನು ದೂರವಿಡುವ ನಿಟ್ಟಿನಲ್ಲಿ ನಾವೆಲ್ಲರೂ ಯೋಚಿಸಬೇಕಾಗಿದೆ. ಅದನ್ನೇ ಮಕ್ಕಳಿಗೆ ತಿಳಿಹೇಳೋಣ. ಮಕ್ಕಳನ್ನೂ ಹಾಗೆಯೇ ಬೆಳೆಸೋಣ.

ಪ್ರತಿಕ್ರಿಯಿಸಿ: feedback@sudha.co.in